## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್‌ಸಿ ನ.ರಾ.ಪುರ

**ಸಿ ಸಿ ನಂ.172/2019**
**(ಸಿ ಸಿ ನಂ.248/2018)**

ಫಿರ್ಯಾದಿ : ಮೆ// ಗ್ರೀನ್ ಬಯೋಟೆಕ್ ಬಾಳೆಹೊನ್ನೂರು, ಅದರ ಅಕೌಂಟ್ಸ್ ಮ್ಯಾನೇಜರ್ ರವರಿಂದ ಪ್ರತಿನಿಧಿಸಲ್ಪಡುತ್ತದೆ, ಕೇರ್ ಆಫ್ ಗ್ರೀನ್ ಬಯೋಟೆಕ್ ಬಾಳೆಹೊನ್ನೂರು-577112, ನ.ರಾ.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿ : ಶ್ರೀ ಗ್ಸೇವಿಯರ್ ಆಲ್ವಿನ್ ನಜರತ್ , ಬಿನ್ ಆಲ್ಫೋನ್ಸ್ ನಜರತ್, 42. ವರ್ಷ, ದಿವ್ಯ ಜ್ಯೋತಿ ಕೃಷಿ ಕೇಂದ್ರದ ಮಾಲಿಕರು, ವಾಸಃ ಪ್ರೆಸ್ಟೀಜ್ ಟವರ್, ಹೊಸ ಬಸ್ ನಿಲ್ದಾಣದ ಹತ್ತಿರ, ಮೂಡಬಿದ್ರಿ - 574227.

## ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆ

ಪಶ್ನೆ 1ಃ ಫಿರ್ಯಾದುದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ ತಿಳಿದುಕೊಂಡಿದ್ದೇನೆ

ಪ್ರಶ್ನೆ 2ಃ ಫಿರ್ಯಾದುದಾರ ಸಂಸ್ಥೆಯ ಅಕೌಂಟ್ಸ್ ಮ್ಯಾನೇಜರ್ ಆದ ಪಿ ಡಬ್ಲ್ಯೂ -1 ರೀವನ್ ಡಿಸೋಜಾರವರು ತಮ್ಮ ಸಾಕ್ಷ್ಯದಲ್ಲಿ ಅವರ ಸಂಸ್ಥೆಯು ಕೃಷಿಗೆ ಸಂಬಂಧಿಸಿದ ಕೀಟನಾಶಕಗಳನ್ನು ಪೂರೈಸುವ ವ್ಯವಹಾರ ಮಾಡುತ್ತಿದ್ದು, ಆರೋಪಿಯಾದ ನೀವು ದಿವ್ಯಜ್ಯೋತಿ ಕೃಷಿ ಕೇಂದ್ರ ಎಂಬ ಗೊಬ್ಬರ ಮತ್ತು ಕೀಟನಾಶಕಗಳ ಸಂಸ್ಥೆಯನ್ನು ಪ್ರೆಸ್ಟೀಜ್ ಟವರ್ ಹೊಸ ಬಸ್ ನಿಲ್ದಾಣದ ಹತ್ತಿರ ಮೂಡಬಿದ್ರಿಯಲ್ಲಿ ನಡೆಸುತ್ತಿದ್ದೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಹೌದು.

ಪ್ರಶ್ನೆ 3ಃ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಅವರ ಗ್ರಾಹಕರಾಗಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಹೌದು,

ಪ್ರಶ್ನೆ 4ಃ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನೀವು ಫಿರ್ಯದುದಾರರ ಸಂಸ್ಥೆಯಿಂದ ಸಾವಯವ ಗೊಬ್ಬರ ಮತ್ತು ಕೀಟನಾಶಕಗಳನ್ನು ಖರೀದಿಸಿದ ಹಣದ ಬಾಬ್ತು ದಿನಾಂಕಃ21-10-2017 ರಂದು ಇಂಡಿಯನ್ ಓವರ್ ಸೀಸ್ ಬ್ಯಾಂಕ್ ಮೂಡಬಿದ್ರೆ ಶಾಖೆಯ ಚೆಕ್ ಸಂಖ್ಯೆ 797499 ನ್ನು ರೂ.1,55,000 ಗಳಿಗೆ ಕೊಟ್ಟಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 5ಃ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸದರಿ ಚೆಕ್ಕನ್ನು ಅವರು ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಬಾಳೆಹೊನ್ನೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಕಾರಣಕ್ಕೆ ಸದರಿ ಚೆಕ್ ಅಮಾನ್ಯಗೊಂಡು ದಿನಾಂಕಃ11-12-2017 ರಂದು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 6ಃ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಈ ಬಗ್ಗೆ ಅವರು ತಮ್ಮ ವಕೀಲರ ಮೂಲಕ ದಿನಾಂಕಃ19-12-2017 ರಂದು ನೋಂದಾಯಿತ ಅಂಚೆಯಲ್ಲಿ ನಿಮಗೆ ನೋಟೀಸನ್ನು ಕಳುಹಿಸಿರುತ್ತಾರೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 7ಃ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸದರಿ ನೋಟೀಸನ್ನು ನೀವು ನಿರಾಕರಿಸಿರುತ್ತೀರಿ ಎಂದು ದಿನಾಂಕಃ23-12-2017 ರಂದು ಅಂಚೆ ಇಲಾಖೆಯ ಹಿಂಬರಹದೊಂದಿಗೆ ವಾಪಾಸಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ನಾನು [illegible]

ಪ್ರಶ್ನೆ 8ಃ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನೀವು ಚೆಕ್ ನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 9ಃ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನೀವು ಅವರಿಗೆ ನೀಡಿದ ಮೂಲ ಚೆಕ್, ಬ್ಯಾಂಕಿನ ಹಿಂಬರಹಗಳು , ವಕೀಲರ ಮೂಲಕ ನೀಡಿದ ನೋಟೀಸಿನ ಕಚೇರಿ ಪ್ರತಿ, ಅಂಚೆ ರಶೀದಿ ಮತ್ತು ವಾಪಾಸಾದ ಅಂಚೆ ಕವರುಗಳನ್ನು ಹಾಜರುಪಡಿಸಿ ನಿಪಿ 1 ರಿಂದ 6 ಎಂದು ಗುರುತಿಸಿಕೊಂಡು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 10ಃ ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ?

ಉತ್ತರಃ ಇದೆ

ಪ್ರಶ್ನೆ 11ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರಃ ಇದೆ.

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು , ಮೇಲೆ ಹೇಳಿರುವುದರು ಸತ್ಯ ಹಾಗೂ ಸರಿಯಾಗಿದೆಯೆಂದು ದೃಢೀಕರಿಸುತ್ತೇನೆ.

ದಿನಾಂಕಃ29ನೇ ದಿವಸ 4 ಮಾಹೆ 2019

29/4/19

(ಅನಿತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್‌ಸಿ, ನ.ರಾ.ಪುರ